ಆರೋಗ್ಯ

# ಆಂಟಿಬಯೋಟಿಕ್ ಜ್ವರ

## ಮಕ್ಕಳಿಗೆ ಬಲುಭಾರ!



**ರೋಗಾಣು ಕಾರಣವಲ್ಲದ, ಜ್ವರ, ಅನಾರೋಗ್ಯಕ್ಕೆ ಆಂಟಿಬಯೋಟಿಕ್ ಔಷಧ ಕೊಡುವುದರಿಂದ ಆರೋಗ್ಯವಂತರಲ್ಲಿಯೂ ಶರೀರ ಜೀವಕೋಶಗಳ ಜೀವರಸಾಯನ ಕ್ರಿಯೆ, ಪಚನಕ್ರಿಯೆ ಅಧಿಕವಾಗುತ್ತದೆ. ದೇಹದ ಶಾಖ ಏರುತ್ತದೆ. ಮೈ ಬೆಚ್ಚಗಾಗುತ್ತದೆ. ಜ್ವರ ಕಾಣಿಸಿಕೊಳ್ಳುತ್ತದೆ. ಇದೇ ಆಂಟಿಬಯೋಟಿಕ್ ಜ್ವರ!**

■ ಡಾ. ಮಯೂರಿ ಎಸ್.

ಮಗುವಿಗೆ ಹುಷಾರಿಲ್ಲ, ಮಗು ಮಂಕಾಗಿದೆ, ಚುರುಕಿಲ್ಲ, ಇರುಸುಮುರುಸು, ಅನಾರೋಗ್ಯ, ಮೈ ಬೆಚ್ಚಗಿದೆ. ಅಳುತ್ತಲೇ ಇದೆ. ಸರಿಯಾಗಿ ಹಾಲು ಕುಡಿಯುತ್ತಿಲ್ಲ. ಆಹಾರ ಸೇವಿಸುತ್ತಿಲ್ಲ. ರಾತ್ರಿಯೆಲ್ಲ ಸರಿಯಾದ ನಿದ್ರೆ ಇಲ್ಲ. ತಾಯಿ ಮಗುವನ್ನು ವೈದ್ಯರ ಬಳಿ ಕರೆದೊಯ್ದಳು. ವೈದ್ಯರು ಮಗುವನ್ನು ಪರೀಕ್ಷಿಸಿ ಜ್ವರ ಇದೆ ಎಂದು ಆಂಟಿಬಯೋಟಿಕ್ ಔಷಧಿ ಬರೆದುಕೊಟ್ಟರು. ವೈದ್ಯರ ಸಲಹೆಯಂತೆ ಔಷಧಿ ಕೊಟ್ಟರೂ, ಒಂದು ವಾರ ಆದರೂ ಜ್ವರ ಕಡಿಮೆಯಾಗಲಿಲ್ಲ. ತಾಯಿಗೆ ಗಾಬರಿ ಆಯಿತು.

ಮತ್ತೊಬ್ಬ ಬೇರೆ ವೈದ್ಯರಿಗೆ ತೋರಿಸಿದಳು. ಅವರೂ ಆಂಟಿಬಯೋಟಿಕ್ ಔಷಧ ಬರೆದುಕೊಟ್ಟರು. ಮಗುವಿಗೆ ಅದನ್ನೂ ಕೊಟ್ಟಳು. ಒಂದು ವಾರ ಆದರೂ ಜ್ವರ ಕಡಿಮೆಯಾಗಲಿಲ್ಲ. ಇನ್ನೂ ಇಬ್ಬರು ವೈದ್ಯರನ್ನು ಬದಲಿಸಿದಳು. ಪ್ರಯೋಜನ ಆಗಲಿಲ್ಲ. ಭೀತಿಯೂ ಶುರುವಾಯಿತು. ತಾಯಿಗೆ ಗಾಬರಿ ಆಯಿತು. ಹಿಂದಿನ ಬೀದಿಯ ಪರಿಚಯಸ್ಥ ಹೆಂಗಸು ಮನೆಗೆ ಬಂದಾಗ ಮಗುವಿನ ಪರಿಸ್ಥಿತಿಯನ್ನು ಆಕೆಯ ಬಳಿ ಬಿಚ್ಚಿಟ್ಟು ಕಣ್ಣೀರಿಟ್ಟಳು. ಆಕೆ ಒಂದು ಸಲಹೆ ಸೂಚಿಸಿದಳು. ಇಲ್ಲೇ ಹತ್ತಿರದ ಶ್ರೀ ಚೌಡೇಶ್ವರಿ ಗುಡಿಗೆ ಹೋಗಿ ಪೂಜೆ ಮಾಡಿಸು. ಎಲ್ಲಾ ಸರಿ ಹೋಗುತ್ತೆ. ಯಾವ ಡಾಕ್ಟರು ಬೇಡ. ಯಾವ ಔಷಧಿನೂ ಬೇಡ! ಆಕೆಯ ಸೂಚನೆಯಂತೆ ಮಗುವಿನ ತಾಯಿ ಚೌಡೇಶ್ವರಿ ಗುಡಿಗೆ ಹೋಗಿ ಅರ್ಚಕರಿಗೆ ವಿಷಯ ತಿಳಿಸಿ ಅರ್ಚನೆ ಮಾಡಿಸಿದಳು. ಹಾಗೆಯೇ ಅರ್ಚಕರ ಸಲಹೆಯಂತೆ ಗುಡಿಯಲ್ಲಿ ದೇವಿಯ ಮುಂದೆ ಇಪ್ಪತ್ತೊಂದು ದಿನ ನಿಂಬೆಹಣ್ಣಿನ ಬಟ್ಟಲಲ್ಲಿ ತುಪ್ಪದ ದೀಪ ಬೆಳಗಿಸಲು ಆರಂಭಿಸಿದಳು. ಅದೇನು ಪವಾಡ! ಒಂದು ವಾರಕ್ಕೇ ಜ್ವರ ಇಳಿಯಿತು! ಮಗು ಮೊದಲಿನಂತೆ ಮಾಮೂಲಾಯಿತು!

ಲವಲವಿಕೆಯಿಂದ ಆಡಿಕೊಳ್ಳತೊಡಗಿತು. ತನ್ನ ಖುಷಿಯನ್ನು ತಾಳಲಾರದೆ ಆ ಗುಡಿಯನ್ನು ಪ್ರದಕ್ಷಿಣೆ ಮಾಡಿ ಬಂದು ಕುಳಿತ ಅಪರಿಚಿತ ಸುಮಾರು ಎಪ್ಪತ್ತೈದು ವರ್ಷದ ಹಿರಿಯರಲ್ಲಿ ತನ್ನ ಸಂತೋಷ, ದೇವಿಯ ಮಹಾತ್ಮೆ ಹಂಚಿಕೊಂಡಳು! ಆ ಹಿರಿಯಾತ ಮುಗುಳ್ನಗುತ್ತಾ 'ನಿಮ್ಮ ನಂಬಿಕೆ ಒಳ್ಳೆಯದೇ. ಆದರೆ ಇದು ದೇವಿಯ ಪವಾಡ ಅಲ್ಲ. ನಿಮ್ಮ ಮಗುವಿಗೆ ಆಂಟಿಬಯೋಟಿಕ್ ಜ್ವರ, ಆಂಟಿಬಯೋಟಿಕ್ ಕೊಡುವುದನ್ನು ನಿಲ್ಲಿಸಿದಿರಿ. ಜ್ವರ ಹೋಯಿತು. ನಾನೂ ಡಾಕ್ಟರೇನೇ. ಮಕ್ಕಳ ಡಾಕ್ಟರ್' ಎಂದು ಜ್ವರದ ಬಗ್ಗೆ ತಿಳಿ ಹೇಳಿದರು.

ಆಂಟಿಬಯೋಟಿಕ್‌ಗಳನ್ನು ತೆಗೆದುಕೊಳ್ಳುವುದರಿಂದ ಬರುವ ಜ್ವರ. ಆಂಟಿಬಯೋಟಿಕ್ ಔಷಧಿಗಳು ಬರಿಸುವ ಜ್ವರ. ಜ್ವರಕ್ಕೆ ರೋಗಾಣುಗಳು ಕಾರಣವಲ್ಲ. ಶರೀರ ಪ್ರಕ್ರಿಯೆ ದೋಷಗಳೂ ಕಾರಣವಲ್ಲ. ಕೇವಲ ಆಂಟಿಬಯೋಟಿಕ್‌ಗಳು. ಆಂಟಿಬಯೋಟಿಕ್‌ಗಳನ್ನು ತೆಗೆದುಕೊಳ್ಳುತ್ತಿರುವವರೆಗೂ ಜ್ವರ ಇರುತ್ತದೆ. ಆಂಟಿಬಯೋಟಿಕ್ ಔಷಧಿಗಳನ್ನು ತೆಗೆದುಕೊಳ್ಳುವುದನ್ನು ನಿಲ್ಲಿಸಿದರೆ ಜ್ವರ ಮಾಯವಾಗುತ್ತದೆ. ಮಕ್ಕಳಲ್ಲಿ ತೀರಾ ಸಾಮಾನ್ಯ. ಇತರ ಎಲ್ಲಾ ವಯಸ್ಸಿನವರಿಗೆ ಹೋಲಿಸಿದರೆ ಮಕ್ಕಳಿಗೆ ಆಂಟಿಬಯೋಟಿಕ್‌ಗಳನ್ನು ಕೊಡುವುದೇ ಹೆಚ್ಚು. ಪೋಷಕರಿಗೆ ಮಕ್ಕಳ ಆರೋಗ್ಯದ ಬಗ್ಗೆ ವಿಪರೀತ ಕಾಳಜಿ. ಮಕ್ಕಳ ಆರೋಗ್ಯದಲ್ಲಿ ಸ್ವಲ್ಪವೇ ಏರುಪೇರಾದರೂ ಓಡುವುದು ಡಾಕ್ಟರ್ ಬಳಿಗೇನೇ. (ಆಂಟಿಬಯೋಟಿಕ್ ಔಷಧಿ ಕೊಡುವ ವೈದ್ಯರು ಒಳ್ಳೆಯ ಡಾಕ್ಟರ್ ಎಂಬ ಭಾವನೆ) ಒಳ್ಳೆಯ ಡಾಕ್ಟರ್ ಸಿಕ್ಕಿದರೆ ಪೋಷಕರ, ಮಕ್ಕಳ ಅದೃಷ್ಟ. ಇಲ್ಲವಾದರೆ ಮಕ್ಕಳ ಮೈ ಸೇರುವುದು ಆಂಟಿಬಯೋಟಿಕ್‌ಗಳೇ.

ಪದವಿ ವೈದ್ಯರಷ್ಟೇ ಅಲ್ಲ, ಪೋಷಕರು ವೈದ್ಯರ ಸೂಚನೆ ಇಲ್ಲದೆ ತಾವಾಗಿಯೇ ತಮ್ಮ ಮಕ್ಕಳಿಗೆ ಆಂಟಿಬಯೋಟಿಕ್ಸ್ ಔಷಧಗಳನ್ನು ಕೊಟ್ಟುಕೊಳ್ಳುವುದು, ಅಲ್ಲದೆ ಹಾಲು, ಆಹಾರ ಮತ್ತಿತರ ಮೂಲಗಳಿಂದಲೂ ಮಕ್ಕಳ ಮೈ